## ಸಾಧನಾ ಪರೀಕ್ಷೆ – 2 (2019–20)

1

ತರಗತಿ : 10 ವಿಷಯ : ಸಮಾಜ ವಿಜ್ಞಾನ ಅಂಕಗಳು : 20 ಅವಧಿ : 45 ನಿಮಿಷಗಳು

**I.ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ** 2x1=2

1. ಭಾರತದ ಚರಿತ್ರೆಯಲ್ಲಿ 18ನೇ ಶತಮಾನ 'ರಾಜಕೀಯ ಸಮಸ್ಯೆಗಳ ಶತಮಾನ'ವೆಂದೇ ಚಿತ್ರಿಸಲ್ಪಟ್ಟಿದೆ. ಇದಕ್ಕೆ ಕಾರಣವಾದವಾದ ಪ್ರಮುಖ ಘಟನೆಯೆಂದರೆ

A) ಪ್ಲಾಸಿ ಕದನದಲ್ಲಿ ಭಾರತೀಯರ ಸೋಲು

B) ಮೊಘಲ್ ಚಕ್ರವರ್ತಿ ಔರಂಗಜೇಬನ ಮರಣ

C) ಬಕ್ಸಾರ್ ಕದನದಲ್ಲಿನ ಸಂಯುಕ್ತ ಸೈನ್ಯದ ಸೋಲು

D) ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ವಿಫಲತೆ

2. ಭಾರತದಲ್ಲಿ ಆಡಳಿತ ವ್ಯವಸ್ಥೆಯಲ್ಲಿ 73ನೇ ಸಂವಿಧಾನಾತ್ಮಕ ತಿದ್ದುಪಡಿ ಒಂದು ಪ್ರಮುಖ ಮೈಲುಗಲ್ಲಾಗಿದೆ. ಕಾರಣ

A) ಸಂಸತ್ತಿನ ವ್ಯವಸ್ಥೆಯಲ್ಲಿ ಸುಧಾರಣೆ ತಂದಿತು.

B) ನಾಗರೀಕ ಸೇವಾ ಪದ್ಧತಿ ಜಾರಿಗೆ ಬಂದಿತು.

C) ಮೀಸಲಾತಿ ಪದ್ಧತಿ ಜಾರಿಗೆ ಬಂದಿತು.

D) ಪಂಚಾಯತ್ ರಾಜ್ ವ್ಯವಸ್ಥೆ ಜಾರಿಗೊಂಡಿತು

**II.ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ** 2x1=2

3. ಹೆನ್ರಿ ವಿವಿಯನ್ ಡಿರೋಜಿಯೋ ಸಂಪ್ರದಾಯವಾದಿಗಳ ಆಕ್ರೋಶಕ್ಕೆ ಗುರಿಯಾಗಬೇಕಾಯಿತು. ಏಕೆ?

4. ಗ್ರಾಮ ಪಂಚಾಯತಿಗಳು ಗ್ರಾಮೀಣ ಕಲೆ ಮತ್ತು ಸಂಸ್ಕೃತಿಯನ್ನು ಹೇಗೆ ಶ್ರೀಮಂತಗೊಳಿಸುತ್ತಿವೆ?

**III.ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ:** 2x2=4

5. ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸಗಳೇನು? ಅಥವಾ
ಸಂಭಾವನೆ ರಹಿತ ಮತ್ತು ಸಂಭಾವನೆ ಸಹಿತ ದುಡಿಮೆಗಾರರ ನಡುವಿನ ವ್ಯತ್ಯಾಸಗಳೇನು?

6. ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಉದ್ಯಮಿಯ ಪ್ರಾಮುಖ್ಯತೆಯನ್ನು ವಿವರಿಸಿ.

**IV.ಈ ಕೆಳಗಿನ ಪ್ರಶ್ನೆಗಳಿಗೆ ಆರರಿಂದ ಎಂಟು ವಾಕ್ಯಗಳಲ್ಲಿ ಉತ್ತರಿಸಿರಿ:** 2x3=6

7. ಪಂಚಶೀಲ ತತ್ವಗಳಾವುವು?

8. ಮಣ್ಣಿನ ಸವೆತವನ್ನು ತಡೆಗಟ್ಟಬಹುದಾದ ಕ್ರಮಗಳೇನು? ಅಥವಾ
ಅರಣ್ಯಗಳು ಭಾರತದ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಸಮರ್ಥಿಸಿ.

**IV.ಈ ಕೆಳಗಿನ ಪ್ರಶ್ನೆಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ:** 1x4=4

9. ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧಕ್ಕೆ ಕಾರಣ ಮತ್ತು ಅದರ ಪರಿಣಾಮಗಳನ್ನು ತಿಳಿಸಿ.
ಅಥವಾ ಆರ್ಯ ಸಮಾಜದ ಉದ್ದೇಶಗಳನ್ನು ತಿಳಿಸಿ.

**V.** 10. ಭಾರತದ ನಕ್ಷೆಯನ್ನು ಬರೆದು ಇವುಗಳನ್ನು ಗುರುತಿಸಿ: 1+1=2

a) ಸಟ್ಲೇಜ್ ನದಿ b) ಹಿರಾಕುಡ್ ಆಣೆಕಟ್ಟು

## ಸಾಧನಾ ಪರೀಕ್ಷೆ – 2 (2019–20)

2

ತರಗತಿ : 10 ವಿಷಯ : ಸಮಾಜ ವಿಜ್ಞಾನ ಅಂಕಗಳು : 20 ಅವಧಿ : 45 ನಿಮಿಷಗಳು

**I.ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ** 2x1=2

1.18ನೇ ಶತಮಾನದಲ್ಲಿ ಮೈಸೂರು ರಾಜ್ಯದ ರಾಜಕೀಯ ಬೆಳವಣಿಗೆಯ ಮೇಲೆ ದುಷ್ಪರಿಣಾಮಗಳನ್ನು ಬೀರಿದ ಘಟನೆಯೆಂದರೆ

A) ಹೈದರಾಲಿ ಮತ್ತು ಟಿಪ್ಪುವಿನ ಏಳಿಗೆ

B) ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿಕೊಂಡಿದ್ದು

C) ಚಿಕ್ಕದೇವರಾಜ ಒಡೆಯರ ಮರಣ

D) ಆಂಗ್ಲೋ ಮರಾಠ ಯುದ್ಧಗಳು

2. ಗ್ರಾಮೀಣ ಪ್ರದೇಶದ ಕೃಷಿ ಅಭಿವೃದ್ಧಿಗೆ ಅತ್ಯವಶ್ಯಕವಾಗಿ ಬೇಕಾಗಿರುವುದು

A) ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಗತಿ

B) ಹಣಕಾಸು ಮತ್ತು ಮಾರುಕಟ್ಟೆ ವಿಸ್ತರಣೆ

C) ಗೃಹ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿ

D) ನೀರಾವರಿ ಮತ್ತು ಭೂ ಸುಧಾರಣೆಗಳು

**II.ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ** 2x1=2

3. ಅನಿಬೆಸೆಂಟರನ್ನು 'ಶ್ವೇತ ಸರಸ್ವತಿ' ಎಂದು ಕರೆಯಲು ಕಾರಣವೇನು?

4. ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮಸಭೆಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಹೇಗೆ?

**III.ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ:** 2x2=4

5. ಭಾರತದಲ್ಲಿ ದುಡಿಮೆಯಲ್ಲಿನ ಅಸಮಾನತೆಗೆ ಕಾರಣಗಳೇನು? ಅಥವಾ
ಸಂಘಟಿತ ವಲಯದಲ್ಲಿ ದುಡಿಮೆ(ಉದ್ದಿಮೆ) ಪ್ರಾರಂಭಿಸಲು ಅನುಸರಿಸಬೇಕಾದ ನಿಯಮಗಳೇನು?

6. ಉದ್ಯಮಿಯ ಕಾರ್ಯಗಳಾವುವು?

**IV.ಈ ಕೆಳಗಿನ ಪ್ರಶ್ನೆಗಳಿಗೆ ಆರರಿಂದ ಎಂಟು ವಾಕ್ಯಗಳಲ್ಲಿ ಉತ್ತರಿಸಿರಿ:** 2x3=6

7. ಭಾರತದ ವಿದೇಶಾಂಗ ನೀತಿಯ ನಿರೂಪಣೆಯಲ್ಲಿ ಅಡಕವಾಗಿರುವ ಸಂಗತಿಗಳಾವುವು?

8. ಮಣ್ಣಿನ ಸವೆತವನ್ನು ನಿಯಂತ್ರಿಸುವುದು ಅತ್ಯಗತ್ಯ. ಏಕೆ? ಅಥವಾ
ಭಾರತದಲ್ಲಿ ಕೈಗೊಂಡಿರುವ ಅರಣ್ಯ ಸಂರಕ್ಷಣಾ ಕ್ರಮಗಳಾವುವು?

**IV.ಈ ಕೆಳಗಿನ ಪ್ರಶ್ನೆಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ:** 1x4=4

9. ಭಾರತದ ಚರಿತ್ರೆಯಲ್ಲಿ 18ನೇ ಶತಮಾನ 'ರಾಜಕೀಯ ಸಮಸ್ಯೆಗಳ ಶತಮಾನ'ವೆಂದೇ ಚಿತ್ರಿಸಲ್ಪಡಲು ಕಾರಣಗಳೇನು? ಅಥವಾ ಭಾರತೀಯ ಸಮಾಜ ಸುಧಾರಣೆಯಲ್ಲಿ ಫುಲೆ ದಂಪತಿಗಳ ಕೊಡುಗೆಯನ್ನು ವಿವರಿಸಿ.

**V.** 10. ಭಾರತದ ನಕ್ಷೆಯನ್ನು ಬರೆದು ಇವುಗಳನ್ನು ಗುರುತಿಸಿ: 1+1=2

a) ನರ್ಮದಾ ನದಿ b) ಪಂಪಸಾಗರ



Use E-Papers, Save Trees
Above line hide when print out

## ಸಾಧನಾ ಪರೀಕ್ಷೆ – 2 (2019–20)

ತರಗತಿ : 10 ವಿಷಯ : ಸಮಾಜ ವಿಜ್ಞಾನ ಅಂಕಗಳು : 20 ಅವಧಿ : 45 ನಿಮಿಷಗಳು

**I.ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ** **2x1=2**

1. ಥ್ಯಾಕರೆಯು ಕಿತ್ತೂರಿನ ಸಂಸ್ಥಾನವನ್ನು ವಶಕ್ಕೆ ಪಡೆಯಲು ಸಹಾಯಕವಾದ ಅಂಶ

A) ಸಹಾಯಕ ಸೈನ್ಯ ಪದ್ಧತಿ

B) ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ

C) ಕಿತ್ತೂರಿನ ದುರಾಡಳಿತ

D) ಕಿತ್ತೂರಿನ ಸಶಸ್ತ್ರ ಬಂಡಾಯ

2. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಏಕೆಂದರೆ ಅವುಗಳು ಗ್ರಾಮೀಣ ಅಭಿವೃದ್ಧಿಯಲ್ಲಿ

A) ನಗರಗಳ ಸೌಲಭ್ಯವನ್ನು ಹಳ್ಳಿಗಳಿಗೆ ನೀಡುತ್ತವೆ.

B) ತಲೆದೋರುವ ಸಮಸ್ಯೆಗಳನ್ನು ಬಗೆಹರಿಸುತ್ತವೆ.

D) ಗ್ರಾಮಗಳ ಜನರು ಪಾಲ್ಗೊಳ್ಳುವಂತೆ ಮಾಡುತ್ತವೆ.

**II.ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ** **2x1=2**

3. ಬಿಳಿಯನ ಮೇಲಿನ ಹೊರೆ ಸಿದ್ಧಾಂತವನ್ನು ಅರ್ಥೈಸಿರಿ.

4. ಗ್ರಾಮೀಣ ಪ್ರದೇಶಗಳಲ್ಲಿ ಅಧಿಕ ಪ್ರಮಾಣದ ಕೃಷಿಯೇತರ ಚಟುವಟಿಕೆಗಳನ್ನು ಪೋಷಿಸುವ ಅಗತ್ಯವಿದೆ. ಏಕೆ?

**III.ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ:** **2x2=4**

5. ಭಾರತದ ದುಡಿಮೆಯೊಳಗಿರುವ ಅಸಮಾನತೆಗಳನ್ನು ವಿವರಿಸಿ. ಅಥವಾ ಅಸಂಘಟಿತ ದುಡಿಮೆಗಾರರು ಅನೇಕ ಸಮಸ್ಯೆಗಳಿಗೆ ಒಳಗಾಗುತ್ತಿದ್ದಾರೆ. ಏಕೆ?

6. ಉದ್ಯಮಗಾರಿಕೆಯ ಗುಣಲಕ್ಷಣಗಳನ್ನು ವಿವರಿಸಿ.

**IV.ಈ ಕೆಳಗಿನ ಪ್ರಶ್ನೆಗಳಿಗೆ ಆರರಿಂದ ಎಂಟು ವಾಕ್ಯಗಳಲ್ಲಿ ಉತ್ತರಿಸಿರಿ:** **2x3=6**

7. ಭಾರತದ ವಿದೇಶಾಂಗ ನೀತಿಯ ಮೂಲಭೂತ ಅಂಶಗಳಾವುವು?

8. ಕಪ್ಪು ಮಣ್ಣು ಕೆಂಪು ಮಣ್ಣಿಗಿಂತ ಹೇಗೆ ಭಿನ್ನವಾಗಿದೆ?

ಅಥವಾ ಮುಂದಿನ ಪೀಳಿಗೆಯ ದೃಷ್ಟಿಯಿಂದ ಅರಣ್ಯ ಸಂರಕ್ಷಣೆ ಅತ್ಯಗತ್ಯ. ಏಕೆ?

**IV.ಈ ಕೆಳಗಿನ ಪ್ರಶ್ನೆಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ:** **1x4=4**

9. 2ನೇ ಆಂಗ್ಲೋ ಮೈಸೂರು ಯುದ್ಧಕ್ಕೆ ಕಾರಣ ಮತ್ತು ಅದರ ಪರಿಣಾಮಗಳನ್ನು ತಿಳಿಸಿ. ಅಥವಾ ಸ್ವಾಮಿ ವಿವೇಕಾನಂದರ ಚಿಂತನೆಗಳನ್ನು ವಿವರಿಸಿ.

**V.** 10. ಭಾರತದ ನಕ್ಷೆಯನ್ನು ಬರೆದು ಇವುಗಳನ್ನು ಗುರುತಿಸಿ: **1+1=2**

a) ಕಾವೇರಿ ನದಿ b) ಗೋವಿಂದ ಸಾಗರ



## ಸಾಧನಾ ಪರೀಕ್ಷೆ – 2 (2019–20)

ತರಗತಿ : 10 ವಿಷಯ : ಸಮಾಜ ವಿಜ್ಞಾನ ಅಂಕಗಳು : 20 ಅವಧಿ : 45 ನಿಮಿಷಗಳು

**I.ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ** **2x1=2**

1. ಸಂಗೊಳ್ಳಿ ರಾಯಣ್ಣನ ಜೀವನ & ದೇಶಪ್ರೇಮವನ್ನು ಆ ಪ್ರದೇಶದ ---- ಇಂದಿಗೂ ಜೀವಂತವಾಗಿಸಿವೆ.

A) ಸ್ಮಾರಕಗಳು

B) ಶಾಸನಗಳು

C) ಪುರಾಣಗಳು

D) ಲಾವಣಿಗಳು

2. ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತಂದಿರುವ ಉದ್ದೇಶ

A) ಮಹಿಳೆಯರನ್ನು ರಾಜಕೀಯವಾಗಿ ಬೆಳೆಸುವುದು

B) ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವುದು

C) ಲಿಂಗಾನುಪಾತ ಹೆಚ್ಚಿಸುವುದು

D) ವಿಕೇಂದ್ರೀಕರಣವನ್ನು ಪ್ರೋತ್ಸಾಹಿಸುವುದು

**II.ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ** **2x1=2**

3. ರಾಜಾ ರಾಮಮೋಹನರಾಯರ ಪ್ರಮುಖ ಕಾಳಜಿ ಏನಾಗಿತ್ತು?

4. ಮಹಿಳಾ ಸ್ವಸಹಾಯ ಸಂಘಗಳು ಗ್ರಾಮೀಣ ಮಹಿಳೆಯರ ವಿಕಾಸಕ್ಕೆ ಸಹಕಾರಿಯಾಗಿವೆ. ಹೇಗೆ?

**III.ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ:** **2x2=4**

5. ಅಸಂಘಟಿತ ದುಡಿಮೆಗಾರರು ಎದುರಿಸುತ್ತಿರುವ ಸಾಮಾಜಿಕ ಭದ್ರತೆಯ ಸವಾಲುಗಳನ್ನು ವಿವರಿಸಿ. ಅಥವಾ ಸಂಘಟಿತ ವಲಯದ ದುಡಿಮೆಗಾರರ ಲಕ್ಷಣಗಳೇನು?

6. ಭಾರತದಲ್ಲಿ ಉದ್ಯಮಿಗಳ ಸ್ವಯಂ ಉದ್ಯೋಗ ಅಭಿವೃದ್ಧಿಗೆ ಹಣಕಾಸಿನ ನೆರವು ನೀಡುತ್ತಿರುವ ಸಂಸ್ಥೆಗಳನ್ನು ಪಟ್ಟಿ ಮಾಡಿರಿ.

**IV.ಈ ಕೆಳಗಿನ ಪ್ರಶ್ನೆಗಳಿಗೆ ಆರರಿಂದ ಎಂಟು ವಾಕ್ಯಗಳಲ್ಲಿ ಉತ್ತರಿಸಿರಿ:** **2x3=6**

7. ಭಾರತ ವಿದೇಶಾಂಗ ನೀತಿಯ ಉದ್ದೇಶ(ಗುರಿ)ಗಳು ಯಾವುವು?

8. ಮಣ್ಣಿನ ಸವೆತಕ್ಕೆ ಮಾನವನ ಕೃತ್ಯಗಳೇ ಕಾರಣ. ಸಮರ್ಥಿಸಿ.? ಅಥವಾ ಉಷ್ಣವಲಯದ ನಿತ್ಯಹರಿದ್ವರ್ಣದ ಕಾಡುಗಳು ಉಷ್ಣವಲಯದ ಎಲೆಉದುರಿಸುವ ಕಾಡುಗಳಿಗಿಂತ ಭಿನ್ನವಾಗಿವೆ. ಹೇಗೆ?

**IV.ಈ ಕೆಳಗಿನ ಪ್ರಶ್ನೆಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ:** **1x4=4**

9. ಸುರಪುರದಲ್ಲಿ ನಡೆದ ಬ್ರಿಟಿಷ್ ವಿರೋಧಿ ಹೋರಾಟವನ್ನು ವಿವರಿಸಿ. ಅಥವಾ ರಾಜಾರಾಮ ಮೋಹನ್ ರಾಯರನ್ನು 'ಭಾರತದ ಪುನರುಜ್ಜೀವನದ ಜನಕ' ಎಂದು ಕರೆಯಲು ಕಾರಣವೇನು?

**V.** 10. ಭಾರತದ ನಕ್ಷೆಯನ್ನು ಬರೆದು ಇವುಗಳನ್ನು ಗುರುತಿಸಿ: **1+1=2**

a) ದಾಮೋದರ ನದಿ b) ಕೃಷ್ಣಾ ಮೇಲ್ದಂಡೆ ಯೋಜನೆ



Use E-Papers, Save Trees
Above line hide when print out